**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):** ಮಾನ್ಯ ಅಧ್ಯಕ್ಷರೇ ಇವತ್ತು ಇರತಕ್ಕಂಥ ಪ್ರಶ್ನೆಯನ್ನು ಶ್ರೀ ಧ್ರುವನಾರಾಯಣರವರು ಕೇಳಿದ್ದಾರೆ. ಸಂತೇಮಾರನಹಳ್ಳಿಯಲ್ಲಿ ಬಹಳ ಗಣಿಗಾರಿಕೆ ನಡೆಯುತ್ತಿದೆ. ಅಲ್ಲಿ 28 ಪಟ್ಟಾ ಜಮೀನಿನಲ್ಲಿ ಬಿಟ್ಟು ಬೇರೆ ಕಡೆಗಳಲ್ಲಿ ನಡೆಯುತ್ತಿದೆ, ಅದು ಹೈಕೋರ್ಟಿನಲ್ಲಿದೆ ಎಂದು ನಾನು ಹೇಳಿದ್ದೇನೆ. ಆದರೂ ಕೂಡ ತನಿಖೆ ಮಾಡಬೇಕೆಂದು ಹೇಳಿದ್ದಾರೆ ನಾನು ಮಾಡುತ್ತೇನೆ. ಚಾಮರಾಜನಗರ ಜಿಲ್ಲೆಯಲ್ಲಿ ವೀರಪ್ಪನ್ ಹೋದ ನಂತರ ಸಾಕಷ್ಟು ಗಣಿಗಾರಿಕೆ ನಡೆಯುತ್ತಿದೆ, ಮತ್ತೆ, ಶ್ರೀ ಶ್ರೀರಾಮರೆಡ್ಡಿಯವರು, ಶ್ರೀ ಮಾಧುಸ್ವಾಮಿಯವರು ಮತ್ತು ಶ್ರೀ ಜಯಪ್ರಕಾಶ್ ಹೆಗ್ಡೆಯವರು ಇದು ಇಡೀ ರಾಜ್ಯದಲ್ಲಿ ಬಹಳಷ್ಟು ಕಡೆ ಅತಿಕ್ರಮವಾಗಿ ನಡೆಯುತ್ತಿದೆ ಎನ್ನುವ ಮಾತನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಈ ಸದನ ಮುಗಿಯುವುದಕ್ಕಿಂತ ಮೊದಲೇ ನಾನು ಸಮಗ್ರವಾದಂಥ ಚರ್ಚೆ ಮಾಡಿ ಹೇಳಿಕೆ ಕೊಡುತ್ತೇನೆ. ಅದರ ಮೇಲೆ ಕೂಡ ವಿವರವಾದ ಚರ್ಚೆಯಾಗಲಿ. ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:** ತಾವು ಚರ್ಚೆಗೆ ಕಾಲ ನಿಗಧಿ ಮಾಡಿ ಕೊಡಬೇಕು.

**ಅಧ್ಯಕ್ಷರು:** ಆಯಿತು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ : 337(4295)

ಮಾನ್ಯ ಸದಸ್ಯರು ಹಾಜರಿರಲಿಲ್ಲ.

**ಗುಲ್ಬರ್ಗಾ ಜಿಲ್ಲೆಯ ಬೆಣ್ಣೆ ತೊರೆಗೆ ಅಡ್ಡಲಾಗಿ ಬ್ರಿಜ್–ಕಂ–ಬ್ಯಾರೇಜ್ ನಿರ್ಮಾಣ**

338(4533) ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಹತ್ತರಗಾ ಹಿಪ್ಪರಗಾ ಗ್ರಾಮದಲ್ಲಿ ಬೆಣ್ಣೆತೊರೆಗೆ ಬ್ರಿಜ್ ಕಂ ಬ್ಯಾರೇಜ್ ನಿರ್ಮಾಣ ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)–

ಅ) ಬಂದಿದೆ.

ಆ) ಬೆಣ್ಣೆತೊರೆ ನದಿಗೆ ಅಡ್ಡಲಾಗಿ ಬ್ಯಾರೇಜುಗಳನ್ನು ಈಗ ಹೊಸದಾಗಿ ನಿರ್ಮಿಸಲು ನೀರಿನ ಲಭ್ಯತೆ ಇಲ್ಲದಿರುವುದರಿಂದ ಈ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ.

**ಶ್ರೀ ರೇವುನಾಯಕ ಬೆಳಮಗಿ:** ಸನ್ಮಾನ್ಯ ಅಧ್ಯಕ್ಷರೇ ಉತ್ತರವನ್ನು ಒದಗಿಸಿದ್ದಾರೆ. ಆದರೆ, ನನಗೆ ಅದು ತೃಪ್ತಿ ಇಲ್ಲ. ಏಕೆಂದರೆ ಬೆಣ್ಣೆತೊರೆ ಬ್ರಿಜ್ ಕಂ ಬ್ಯಾರೇಜ್ ಬಗ್ಗೆ ನಾನು ಕೇಳಿದ್ದೇನೆ. ಇದು 18 ವರ್ಷಗಳಿಂದ ಜನರ ಬೇಡಿಕೆ ಕೂಡ ಇದೆ. ಹಿಂದಿನ ಜನತಾದಳ ಗೌರ್ನಮೆಂಟ್ ಇದ್ದಾಗ ಎಸ್ಟಿಮೇಟ್ ಕೂಡ ಮಾಡಿದ್ದಾರೆ. ಅದು ಬೀದರ್, ಬಸವಕಲ್ಯಾಣ, ಆಳಂದ ಸೋಲಾಪುರ ಮಾರ್ಗದ ರಸ್ತೆ. ಹತ್ತರಗಾ–ಹಿಪ್ಪರಗಾ ಎರಡೂ ಸೆಂಟರ್‌ನಲ್ಲಿ ಬೆಣ್ಣೆತೊರೆ ಎಂದರೆ ದೊಡ್ಡ ನದಿ ಇದೆ. ಆ ನದಿ ಬಗ್ಗೆ ನೀರಿನ ಸೌಲಭ್ಯವಿಲ್ಲದ್ದರಿಂದ, ನಿರ್ಮಿಸಲಾಗುವುದಿಲ್ಲ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ನೀರಿನ ಸೌಲಭ್ಯ ಎಂದರೆ ಏನು ಬ್ರಿಜ್ ಕಂ ಬ್ಯಾರೇಜ್ ಕಟ್ಟುವುದಕ್ಕೆ ನೀರಿಲ್ಲವೋ? ಅಥವಾ ಆ ನದಿಗೆ ನೀರಿಲ್ಲವೋ ಎಂಬ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಉತ್ತರ ಕೊಡಬೇಕು. ಏಕೆಂದರೆ, ಅದು ದೊಡ್ಡ ನದಿ. ಅದು ಭೀಮಾ ನದಿಗಿಂತ ದೊಡ್ಡ ನದಿಯಾಗಿದ್ದು ಬೆಣ್ಣೆತೊರೆ ಎಂದು ಫೇಮಸ್ ಇದೆ. ಮಹಾರಾಷ್ಟ್ರದಲ್ಲಿ ಅರ್ಧ ಅರ್ಧ ಕಿಲೋಮೀಟರ್‌ನಲ್ಲಿ ಬ್ರಿಜ್ ಕಂ ಬ್ಯಾರೇಜ್ ಕಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಬರುವಂಥ 80 ಕಿಲೋಮೀಟರ್ ನದಿ ಇದು. ಅದಕ್ಕೆ ಎಲ್ಲಿಯೂ ಕೂಡ ಅಡ್ಡ ಕಾಲುವೆ ಕಟ್ಟಿಲ್ಲ. ಅದಕ್ಕಾಗಿ ಜನರ ಬೇಡಿಕೆ ಕೂಡ ಇದೆ. ಇದರ ಸಲುವಾಗಿ ಸಾಕಷ್ಟು ಹೋರಾಟವನ್ನು ಮಾಡಿದ್ದಾರೆ. ನಮ್ಮ ಮಾನ್ಯ ಖರ್ಗೆ ಸಾಹೇಬರಿಗೂ ಕೂಡ ಮನವಿ ಪತ್ರ ಕೊಟ್ಟಿದ್ದಾರೆ. ದಯವಿಟ್ಟು ಏನಾದರೂ ಪರಿಗಣಿಸಿ ಈ ಬ್ರಿಜ್ ಕಂ ಬ್ಯಾರೇಜ್ ಮಾಡಬೇಕೆಂದು ನಾನು ತಮ್ಮ ಮೂಲಕ ಅವರನ್ನು ಒತ್ತಾಯ ಮಾಡತ್ತೇನೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಬ್ರಿಜ್ ಕಂ ಬ್ಯಾರೇಜ್ ಮಾಡತಕ್ಕಂಥ ಪ್ರಸ್ತಾವನೆ ಹಿಂದೆ ಯಾವಾಗಲೂ ಕೂಡ ಇರಲಿಲ್ಲ. ಅವರು, ಈ ಹಿಂದೆ ಒಂದು ಸಲ ಎಸ್ಟಿಮೇಟ್ ಮಾಡಿ ಇಟ್ಟಿದ್ದರೆಂದು ಹೇಳುತ್ತಾರೆ. ಆದರೆ, ಬೆಣ್ಣೆತೊರೆ

ಇರಿಗೇಷನ್ ಪ್ರಾಜೆಕ್ಟ್‌ಗೆ ಈಗಾಗಲೇ 5.75 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿದೆ. ಅಂದರೆ, ನಮ್ಮ ಪಾಲಿಗೆ ಬರತಕ್ಕಂಥ ನೀರನ್ನು ಈಗಾಗಲೇ ಬೆಣ್ಣೆತೊರೆ ಇರಿಗೇಷನ್ ಪ್ರಾಜೆಕ್ಟ್‌ಗೆ ಅಲೋಕೇಷನ್ ಆದ ಕಾರಣ, ಹೊಸ ಬ್ಯಾರೇಜ್ ಅನ್ನು ನಾವು ಮಾಡಿದರೆ, ಅದಕ್ಕೆ ನೀರಿನ ಅಲೋಕೇಷನ್ ಇಲ್ಲ. ಆ ಕಾರಣದಿಂದ, ಅದು ಫೀಜಿಬಲ್ ಇಲ್ಲವೆಂದು ಹೇಳಿ ತೆಗೆದುಕೊಂಡಿದ್ದೇವೆಯೇ ಹೊರತಾಗಿ ನಾವು ಅಲ್ಲಿ ಇನ್ನೊಂದು ಬ್ಯಾರೇಜ್ ಮಾಡಬಾರದು ಎನ್ನತಕ್ಕಂಥ ಉದ್ದೇಶ ಇಲ್ಲ. ಆದರೆ ಅದಕ್ಕೆ ನೀರಿನ ಅಲೋಕೇಷನ್ ಇಲ್ಲ. 5.75 ಟಿ.ಎಂ.ಸಿ. ನೀರು ಏನಿದೆ, ಅದನ್ನು ಬೆಣ್ಣೆತೊರೆ ಇರಿಗೇಷನ್ ಪ್ರಾಜೆಕ್ಟ್‌ನಲ್ಲಿ ಕಂಪ್ಲೀಟ್ ಆಗಿ ನಾವು ಯುಟಿಲೈಜ್ ಮಾಡುತ್ತಿದ್ದೇವೆ. ಅವರಿಗೂ ಕೂಡ ಗೊತ್ತಿದ್ದ ಹಾಗೆ, ಅದು 20 ಸಾವಿರದ 234 ಹೆಕ್ಟೇರ್‌ಗೆ ನೀರಾವರಿಯಾಗುತ್ತದೆ. ಅದು ಸುಮಾರು 315 ಕೋಟಿ ರೂಪಾಯಿಗಳ ರಿವೈಸ್ಡ್ ಎಸ್ಟಿಮೇಟ್ ಆಗಿದೆ. ಈಗಾಗಲೇ ಸರ್ಕಾರ 251 ರೂಪಾಯಿ ಖರ್ಚು ಮಾಡಿ ಬೆಣ್ಣೆತೊರೆ ಪ್ರಾಜೆಕ್ಟ್ ಅನ್ನು ತೆಗೆದುಕೊಂಡಿದ್ದೇವೆ. ಈ ವರ್ಷ ಕೂಡ ಸುಮಾರು ಇಲ್ಲಿಯವರೆಗೆ ಈ ಮೂರು ತಿಂಗಳಲ್ಲಿ ಕೂಡ ಹೆಚ್ಚು ಕಡಿಮೆ 27 ಕೋಟಿ ರೂಪಾಯಿ ಖರ್ಚು ಮಾಡಿ ಸಾಕಷ್ಟು ಸ್ಪೀಡ್‌ನಿಂದ ಕೆಲಸ ನಡೆದಿದೆ. ಮತ್ತು ಬೆಣ್ಣೆತೊರೆ ಇರಿಗೇಷನ್ ಪ್ರಾಜೆಕ್ಟ್ ಕೆಳಗಡೆ ಪ್ರಥಮವಾಗಿ ಈ ವರ್ಷ ನೀರನ್ನು ಕೊಡತಕ್ಕಂಥ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದಕಾರಣ, ಈ ಒಂದು ಹಿಪ್ಪರಗಾ ಗ್ರಾಮದಲ್ಲಿ ಬೆಣ್ಣೆತೊರೆ ನದಿಗೆ ಅಡ್ಡಲಾಗಿ ಇನ್ನೊಂದು ಬ್ಯಾರೇಜ್ ನಿರ್ಮಾಣ ಮಾಡುವುದಕ್ಕೆ ಇದೊಂದು ನೀರಿನ ಕೊರತೆ ಇದ್ದ ಕಾರಣ, ನಾವು ಮಾಡುತ್ತಿಲ್ಲ. ನೀರು ನದಿಯಲ್ಲಿ ಹರಿದೇ ಹರಿಯುತ್ತದೆ. ಆದರೆ, ಒಂದು ಕಡೆ ನೀವು ಬ್ಲಾಕ್ ಮಾಡಿದರೆ, ಕೆಳಗಡೆ ನಾವೇನು ಸುಮಾರು 20 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಅಚ್ಚುಕಟ್ಟು ಮಾಡಬೇಕೆಂದು ಮಾಡಿದ್ದೇವೆ, ಅದಕ್ಕೆ ತೊಂದರೆಯಾಗುತ್ತದೆ. ಆ ಒಂದು ದೃಷ್ಟಿಯಿಂದ ಇದು ಫೀಸಿಬಲ್ ಇಲ್ಲವೆಂದು ಹೇಳಿ ಆ ನದಿ ಮೇಲೆ ಇದನ್ನು ಮಾಡುತ್ತಿಲ್ಲ. ಅದಕ್ಕಾಗಿ ಇದನ್ನು ತೆಗೆದುಕೊಂಡಿದ್ದೇವೆ ಹೊರತಾಗಿ ಬೇರೆ ಏನೂ ಕಾರಣ ಇಲ್ಲ. ತಮಗೆ ಗೊತ್ತಿರುವ ಹಾಗೆ, ಹತ್ತಾರು ವರ್ಷದಿಂದ ಬೆಣ್ಣೆತೊರೆ ಇರಬಹುದು, ಕಾಗನ ಇರಬಹುದು, ಭೀಮ ಇರಬಹುದು ಈ ಬ್ರಿಜ್‌ಗಳನ್ನು ನಾವು ತೆಗೆದುಕೊಂಡಿದ್ದೇವೆ. ಅದಕ್ಕೆ ಫೀಸಿಬಿಲಿಟಿ ದೃಷ್ಟಿಯಿಂದ ಇದನ್ನು ನಾವು ಮಾಡಿಲ್ಲ. ಇನ್ನೊಮ್ಮೆ ಸಣ್ಣ ಬಾಂಧಾರ 'ನಮ್ಮ ಊರು ನಮ್ಮ

ಬಾಂಧಾರ' ಎನ್ನುವ ಯೋಜನೆ ಕೆಳಗಡೆ ಏನಾದರೂ ಇದು ಬಂದರೆ, ಅಥವಾ ತಾತ್ವಿಕವಾಗಿ ಸ್ವಲ್ಪ ಕೆಳ ಮಟ್ಟದಲ್ಲಿ ಕೊಲ್ಲಾಪುರಿ ವೆಂಟೆಡ್ ಡ್ಯಾಂ ಆ ಪ್ರಕಾರ ಏನಾದರೂ ಆಗುತ್ತಿತ್ತು. ಎಂದರೆ ಅದಕ್ಕೆ ಪುನರ್ ಪರಿಶೀಲನೆಯನ್ನು ನಾನು ಮಾಡುತ್ತೇನೆ.

**ಶ್ರೀ ರೇವುನಾಯಕ ಬೆಳಮಗಿ:** ಬ್ರಿಜ್ ಕಂ ಬ್ಯಾರೇಜ್ ಅಂಥ ದೊಡ್ಡದಿಲ್ಲ.

**ಅಧ್ಯಕ್ಷರು:** ಆಯಿತಲ್ಲ. ವಿವರವಾಗಿ ಹೇಳಿದ್ದಾರೆ. ಸಮಯ ಆಯಿತು.

**ಶ್ರೀ ರೇವುನಾಯಕ ಬೆಳಮಗಿ:** ಬಹುಶಃ 4–5 ಕೋಟಿ ರೂಪಾಯಿಗಳಲ್ಲಿ ಆ ಕೆಲಸವಾಗುತ್ತದೆ ಮತ್ತು 8–9 ಹಳ್ಳಿಗಳಿಗೆ ನೀರಿನ ಸಮಸ್ಯೆ ಪರಿಹಾರ ವಾಗುತ್ತದೆ, ರೈತರಿಗೂ ಉಪಯೋಗವಾಗುತ್ತದೆ. ಸಿದ್ದಾಪುರ ತಾಲ್ಲೂಕಿನ ಹೆಬ್ಬಾಳದಲ್ಲಿ ಬೆಣ್ಣೆತೊರೆ ನೀರಾವರಿ ಪ್ರಾಜೆಕ್ಟ್ ಏನು ಮಾಡಿದ್ದಾರೆ, ಅಲ್ಲಿಂದ 80 ಕಿಲೋಮೀಟರ್ ಆಗುತ್ತದೆ. ಹತ್ತರಗಾ–ಹಿಪ್ಪರಗಾ ಅಂದರೆ, ನಮ್ಮದು ಮಹಾರಾಷ್ಟ್ರ ಸನಿಹ ಇದೆ. ಅದಕ್ಕೆ ಸಣ್ಣದಾದ ಒಂದು ಬ್ರಿಜ್ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ನೀರಾವರಿ ಸಚಿವರು, ತಾವು ಮನಸ್ಸು ಮಾಡಿದರೆ ಆಗುತ್ತದೆ. ಹಿಂದೊಮ್ಮೆ ಅದು ಪ್ರಪೋಸಲ್ ಇತ್ತು, ಆಮೇಲೆ ಡ್ರಾಪ್ ಆಗಿದೆ. ಅದು ಕೆಳ ಭಾಗದಲ್ಲಿ ಬರುವುದರಿಂದ, ಮೇಲುಭಾಗದಲ್ಲಿ ನೀವು ಏನು ಸುಮಾರು 20 ಸಾವಿರ ಹೆಕ್ಟೇರಿಗೆ ನೀರು ಕೊಡಬೇಕು, ಅದಕ್ಕೆ ಇದು ಎಫೆಕ್ಟ್ ಆಗುವುದಿಲ್ಲ. ಒಬ್ಬ ಶಾಸಕರ ಕ್ಷೇತ್ರಕ್ಕೆ ಅನುಕೂಲವಾಗುವುದರಿಂದ, 4–5 ಗ್ರಾಮಗಳಿಗೆ ಅನುಕೂಲವಾಗುವುದರಿಂದ, ದಯವಿಟ್ಟು ತಾವು ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಿ ಅನುಕೂಲ ಮಾಡಿಕೊಡಬೇಕು.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಡೆಫೆನೆಟ್‌ಲಿ ಈಗ ನಮಗೆ....

**ಶ್ರೀ ಬಿ.ಎನ್. ಯಡಿಯೂರಪ್ಪ:** ಕೆಳ ಭಾಗದಲ್ಲಿ ಮಹಾರಾಷ್ಟ್ರಕ್ಕೆ ಹತ್ತಿರ ಹತ್ತಿರಕ್ಕೆ ಬರುವುದರಿಂದ...

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಇದು ಮೇಲ್‌ಭಾಗದಲ್ಲಿ ಬರುತ್ತದೆ. ಮೇಲ್ಭಾಗದಲ್ಲಿ ಬರುವುದರಿಂದ ಈಗಾಗಲೇ ನಾವು 315 ಕೋಟಿ ರೂಪಾಯಿ ಖರ್ಚು ಮಾಡಿ ದೊಡ್ಡ ಬೆಣ್ಣೆತೊರೆ ಪ್ರಾಜೆಕ್ಟನ್ನು ತೆಗೆದುಕೊಳ್ಳುತ್ತಿದ್ದೇವೆ. ಅದರಲ್ಲಿ ಸುಮಾರು ...

**ಶ್ರೀ ಬಿ.ಎಸ್. ಯಡಿಯೂರಪ್ಪ:** ಹಿಂದೆ ಮಾಡಿದ್ದಿರಿ. ಪುನರ್ ಪರಿಶೀಲನೆ ಮಾಡಬೇಕು.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಡೆಫಿನೆಟ್‌ಲಿ ಬರುತ್ತದೆಂದರೆ, ಇನ್ನೊಮ್ಮೆ ಪರಿಶೀಲನೆ ಮಾಡೋಣ. ಅವರು ಹೇಳಿದ ಮೇಲೆ ನಾನು ಹೇಳುತ್ತಿದ್ದೇನೆ, ಆಗುತ್ತದೆ ಎಂದರೆ, Definitely we will consider.

ಪ್ರಶ್ನೆ ಸಂಖ್ಯೆ: 339 (4033)
ಮಾನ್ಯ ಸದಸ್ಯರು ಗೈರು ಹಾಜರಿದ್ದರು
ಪ್ರಶ್ನೆ ಸಂ. 340 (40300

**ಅಧ್ಯಕ್ಷರು:** ಜಗದೀಶ್ ಶೆಟ್ಟರ್‌ರವರೆ, ನಿಮ್ಮ ಪ್ರಶ್ನೆ.....

**ಶ್ರೀ ಜಗದೀಶ್ ಶೆಟ್ಟರ್:** ಸನ್ಮಾನ್ಯ ಅಧ್ಯಕ್ಷರೇ, ಈ ಕೃಷ್ಣಾ, ಗೋದಾವರಿ ಐತೀರ್ಪು ಬಗ್ಗೆ ಮತ್ತು ಏನು ಕಾಮಗಾರಿಗಳು ನಡೆಯುತ್ತಿವೆ, ಆಂಧ್ರಪ್ರದೇಶದ ಅಕ್ರಮ ಕಾಮಗಾರಿಗಳೇನು ನಡೆಯುತ್ತಿವೆ, ಆ ಬಗ್ಗೆ ಕಳೆದ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ.

**ಅಧ್ಯಕ್ಷರು:** ಏನಾಗಿದೆ ಎಂದರೆ....

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಏಕೆಂದರೆ ಅದು ದೀರ್ಘವಾಗಿ.....

**ಅಧ್ಯಕ್ಷರು:** ಟ್ರಿಬ್ಯೂನಲ್ ಮುಂದೆ ಇದೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಇಲ್ಲಿ ಚರ್ಚೆ ಬೇಡವೆಂದು ಹೇಳಿ ನಾವೇಕೆ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ ಎಂದರೆ, ಇಲ್ಲೀಗಲ್ ಪ್ರಾಜೆಕ್ಟ್ ಯಾವುವು ಎಂಬುದು ತಮಗೂ ಕೂಡ ಗೊತ್ತಿದೆ, ಮೆಮೊರಾಂಡಂ ಅನ್ನು ಕೂಡ ನಾವು ಕೊಟ್ಟಿದ್ದೇವೆ. ಕೋರ್ಟಿನಲ್ಲಿ ಈಗಾಗಲೇ ನಾವು ಅಫಿಡವಿಟ್ ಕೂಡ ಫೈಲ್ ಮಾಡಿದ್ದೇವೆ. ಆದರೆ ತಾವು ಯಾವ್ಯಾವ ಪ್ರಾಜೆಕ್ಟ್‌ಗೆ ಎಷ್ಟೆಷ್ಟು ನೀರು ಉಪಯೋಗ ಮಾಡಿದ್ದೀರಿ, ಎಷ್ಟು ಮಾಡಿಲ್ಲ ಎಂದು ಕೇಳಿದ್ದೀರಿ. ಈ ಡೀಟೇಲ್ ಚರ್ಚೆ ಈಗ ಆದರೆ ಸರಿ ಹೋಗುವುದಿಲ್ಲ. ಏಕೆಂದರೆ, ಆಗಸ್ಟ 4ನೇ ತಾರೀಖು ಕೃಷ್ಣಾ ಟ್ರಿಬ್ಯೂನಲ್ ಕೇಸ್ ಇದೆ. 4ನೇ ತಾರೀಖು ಅವರೂ ಕೂಡ ಕೌಂಟರ್ ಅಫಿಡವಿಟ್ ಹಾಕಬೇಕು ಮತ್ತು ಅಲ್ಲಿ ಚರ್ಚೆಗೆ ಕೂಡ ಬರುತ್ತದೆ. ಈ ಹಿಂದೆ ತಮಗೆ ಗೊತ್ತಿರುವ ಹಾಗೆ, ಈ ಸದನದಲ್ಲಿ ನಾವೇನು ಚರ್ಚೆ ಮಾಡಿದ್ದೇವೆ, ಅದು ಪತ್ರಿಕೆಯಲ್ಲಿ ಬಂದಿದ್ದನ್ನು ತಮಿಳುನಾಡಿನವರು ಆ್ಯಸ್ ಇಟೀಸ್ ತೆಗೆದುಕೊಂಡು ಹೋಗಿ ಈ ರೀತಿಯಾಗಿ ಕರ್ನಾಟಕದವರು ಮಾಡುತ್ತಿದ್ದಾರೆ